-ಸ್ವಾಮಿ ಪ್ರೇಮೇಶಾನಂದ

# ಆತ್ಮವಿಕಾಸ- ವಿದ್ಯಾರ್ಥಿಗಳಿಗೆ ಕಿವಿಮಾತು -೧

ಅನುವಾದ: ಸ್ವಾಮಿ ಕರುಣಾಕರಾನಂದ




## ಸ್ವಾಮಿ ಪ್ರೇಮೇಶಾನಂದರ ಜೀವನವೃತ್ತಾಂತ

ಸ್ವಾಮಿ ಪ್ರೇಮೇಶಾನಂದರು ಶ್ರೀಮಾತೆ ಶಾರದಾ ದೇವಿಯವರಿಂದ ಮಂತ್ರದೀಕ್ಷೆಯನ್ನು ಪಡೆದಿದ್ದರು. ಸ್ವಾಮಿ ಶಿವಾನಂದರು (ಮಹಾಪುರುಷ್ ಮಹರಾಜ್) ಅವರಿಗೆ ಸಂನ್ಯಾಸ ನೀಡಿದ ಗುರುಗಳು. ಪ್ರೇಮೇಶಾನಂದರ ಪೂರ್ವಾಶ್ರಮದ ಹೆಸರು ಶ್ರೀ ಇಂದ್ರದಯಾಲ್ ಭಟ್ಟಾಚಾರ್ಯ. ಹೆಸರಾಂತ ತಂತ್ರ ಸಾಧಕರೂ (ಈಗಿನ ಬಾಂಗ್ಲಾದೇಶದಲ್ಲಿರುವ) ವಿಜ್ಞಿಯ ರಾಜನಿಗೆ ಗುರುವೂ ಆಗಿದ್ದ ಶ್ರೀ ಮೃತ್ಯುಂಜಯ ಭಟ್ಟಾಚಾರ್ಯರ ಕೊನೆಯ ಮಗನಾಗಿ ೧೮೮೪ರ ಸೆಪ್ಟೆಂಬರ್ ತಿಂಗಳಿನಲ್ಲಿ ಇಂದ್ರದಯಾಲ್ ಜನಿಸಿದರು. ಅವರ ತಾಯಿ ಶ್ರೀಮತಿ ಶಿವಪ್ರಿಯಾ ದೇವಿಯು ಅಪಾರವಾದ ಧಾರ್ಮಿಕ ಶ್ರದ್ಧೆಯುಳ್ಳ ಮಹಿಳೆ. ಅಸಾಧಾರಣ ವೈರಾಗ್ಯ ಮತ್ತು ದೈವಭಕ್ತಿ ಆಕೆಯ ಜೀವನದ ಅವಿಭಾಜ್ಯ ಅಂಗವಾಗಿದ್ದವು. ಪುರಾತನ ಸಂಪ್ರದಾಯದ ಕಟ್ಟು-ಕಟ್ಟಳೆಗಳನ್ನು ಆಕೆ ಬಹು ಮಟ್ಟಿಗೆ ಪಾಲಿಸಿಕೊಂಡು ಬರುತ್ತಿದ್ದರೂ, ಕಾಲಕ್ಕೆ ತಕ್ಕಂತೆ ಬದಲಾಗುತ್ತಿರುವ ರೀತಿ-ರಿವಾಜುಗಳನ್ನು ಸಹಾನುಭೂತಿಯಿಂದ ನೋಡಿ, ಹೊಂದಿಕೊಂಡು ಹೋಗುವ ಉದಾರ ಮನೋಭಾವವೂ ಇತ್ತು. ತನ್ನ ತಾಯಿಯ ಈ ಎಲ್ಲ ಅದ್ಭುತ ಗುಣಗಳೂ ಇಂದ್ರದಯಾಲನ ವ್ಯಕ್ತಿತ್ವದ ಮೇಲೆ ಅಗಾಧ ಪರಿಣಾಮವನ್ನು ಉಂಟು ಮಾಡಿದವು.




ಬಾಲ್ಯದಿಂದಲೇ ಇಂದ್ರದಯಾಲನಿಗೆ ಪ್ರಾಪಂಚಿಕ ಜೀವನದಲ್ಲಿ ಆಸಕ್ತಿಯಿರಲಿಲ್ಲ. ನಂತರ, ಸಿಲ್ಹಟ್ಟಿನ ಶಾಲೆಯೊಂದರಲ್ಲಿ ಕೆಲಸ ಮಾಡುತ್ತಿರುವಾಗ ಶ್ರೀರಾಮಕೃಷ್ಣ ಹಾಗೂ ಸ್ವಾಮಿ ವಿವೇಕಾನಂದರ ಸಾಹಿತ್ಯವನ್ನು ಅಧ್ಯಯನ ಮಾಡಿದ ಇಂದ್ರದಯಾಲನಿಗೆ 'ರಾಮಕೃಷ್ಣ ಕಥಾಮೃತ'ವನ್ನು ಓದಬೇಕೆಂಬ ಹಂಬಲ ಉಂಟಾಯಿತು. ಅದನ್ನು ಓದಿದ ಮೇಲೆ ತನ್ನ ಜೀವನವನ್ನು ರಾಮಕೃಷ್ಣರ ಜೀವನಾದರ್ಶದಂತೆ ರೂಪಿಸಿಕೊಳ್ಳಬೇಕೆಂಬ ಹೆಬ್ಬಯಕೆಯಾಯಿತು. ಮೊದಲಿನಿಂದಲೂ ಪೂಜೆ-ಧ್ಯಾನಗಳಲ್ಲಿ ಆಸಕ್ತನಾಗಿದ್ದ ಇಂದ್ರದಯಾಲನು ಈಗ ಮನೆಯಲ್ಲಿ, ತನ್ನ ಸಾಧನೆಗಾಗಿ ಗುಪ್ತ ಕೋಣೆಯೊಂದನ್ನು ಮಾಡಿಕೊಂಡ. ದಿನದ ಬಹು ವೇಳೆ ಆಧ್ಯಾತ್ಮಿಕ ಸಾಧನೆಯಲ್ಲಿ ಕಳೆಯುತ್ತಿತ್ತು. ಇದರಿಂದ ಆತನಲ್ಲಿ ಭಗವತ್ಸಾಕ್ಷಾತ್ಕಾರದ ಹಂಬಲ ನೂರ್ಮಡಿಯಾಯಿತು; ವ್ಯಾಕುಲತೆಯ ವೇದನೆ ತೀವ್ರವಾಯಿತು. ಭಗವಂತನ ದರ್ಶನವಾಗದಿದ್ದಲ್ಲಿ ತನ್ನ ಪ್ರಾಣವನ್ನೇ ಬಲಿ ಕೊಡಲು, ತನ್ನ ಕೋಣೆಯಲ್ಲಿ ನೇಣಿನ ಹಗ್ಗವೊಂದನ್ನೂ ಇಟ್ಟುಕೊಂಡಿದ್ದನ್ನು ಆತನೇ ತನ್ನ ಸ್ನೇಹಿತರಿಗೆ, ಅನಂತರ ತಿಳಿಸಿದ್ದಾನೆ! ಆದರೆ, ಜಗನ್ಮಾತೆಯ ಇಚ್ಛೆಯಿಂದ ಅವನ ಎಲ್ಲ ಅಶಾಂತತೆಗಳು ದೂರವಾಗಿ, ಹೃದಯವು ಶಾಂತಿ-ಆನಂದಗಳಿಂದ ತುಂಬಿತು. ಹೃದಯದ ಭಾವ ತುಂಬಿ ಬಂದು ಜಗನ್ಮಾತೆಯ ಮೇಲಿನ ಹಾಡಾಗಿ ಹೊಮ್ಮಿದವು: "ತಾಯ ಪದದುಗುರಿನಲಿ ನಗುತಲಿಹರು ನೂರು ಸಾಸಿರ ಶಶಿಯರು, ಅವಳ ಕಾಳಿಯ ರೂಪವು ಬೆಳಗುತಿಹುದು ನನ್ನೆದೆಯನು".

ಕ್ರಮೇಣ ಇಂದ್ರದಯಾಲನಿಗೆ, ರಾಮಕೃಷ್ಣ ಕಥಾಮೃತದ ಕರ್ತೃವಾದ 'ಮ' (ಮಹೇಂದ್ರನಾಥ ಗುಪ್ತ), ರಾಮಕೃಷ್ಣರ ಅಣ್ಣನ ಮಗನಾದ ರಾಮಲಾಲ, ಸ್ವಾಮಿಜಿಯ ಗೃಹೀಶಿಷ್ಯರಾದ ಶರಚ್ಚಂದ್ರ ಚಕ್ರವರ್ತಿ, ರಾಮಕೃಷ್ಣರ ಶಿಷ್ಯೆಯಾದ ಗೋಲಾಪ್ ಮಾ ಇವರುಗಳ ಪರಿಚಯವಾಯಿತು. ಈ ಮಧ್ಯೆ ಇಂದ್ರದಯಾಲನು ಸ್ವಾಮಿ ಬ್ರಹ್ಮಾನಂದ, ಸ್ವಾಮಿ ಶಿವಾನಂದ, ಸ್ವಾಮಿ ಶಾರದಾನಂದ, ಸ್ವಾಮಿ ಅದ್ಭುತಾನಂದ ಹಾಗೂ ಇತರ ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರ ಸಂಪರ್ಕಕ್ಕೂ ಬಂದನು. ಇದೇ ಸಮಯದಲ್ಲಿ, ಅಂದರೆ ೧೯೧೩ರಲ್ಲಿ, ಶ್ರೀಮಾತೆ ಶಾರದಾ

ದೇವಿಯವರಿಂದ ಅವನಿಗೆ ಮಂತ್ರದೀಕ್ಷೆಯೂ ಆಯಿತು. ತನ್ನ ಸುಮಧುರ ಕಂಠದಿಂದ ಭಜನೆಗಳನ್ನು ಹಾಡುವುದರೊಂದಿಗೆ ಇಂದ್ರದಯಾಲನು ಎಲ್ಲರ ಹೃದಯವನ್ನೂ ಗೆದ್ದಿದ್ದ. ಸ್ವತಃ ಕೀರ್ತನೆಗಳನ್ನೂ ರಚಿಸುತ್ತಿದ್ದ. ಅವನು ರಚಿಸಿದ ಕೀರ್ತನೆಗಳನ್ನು ಕೇಳಿದ ಬೇಲೂರುಮಠದ ಹಿರಿಯ ಸಾಧುಗಳೆಲ್ಲ, "ಈ ಕೀರ್ತನೆಗಳನ್ನು ರಚಿಸಿದವನು ಖಂಡಿತವಾಗಿಯೂ ಆಧ್ಯಾತ್ಮಿಕ ಬೆಳಕನ್ನು ಕಂಡಿರಲೇಬೇಕು", ಎಂದು ಒಕ್ಕೊರಲಿನಿಂದ ಹೇಳುತ್ತಿದ್ದರು.

೧೯೧೯ರ ಹೊತ್ತಿಗೆ ಅನೇಕ ಯುವಕರು ಇಂದ್ರದಯಾಲರ ದಿವ್ಯ ವ್ಯಕ್ತಿತ್ವದಿಂದ ಪ್ರಭಾವಿತರಾಗಿ, ಸಂಸಾರವನ್ನು ತ್ಯಜಿಸಿ, ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳಾದರು. ಹಾಗೆ ಆಶ್ರಮ ಸೇರಿ ಸಂನ್ಯಾಸಿಗಳಾದವರಲ್ಲಿ ಹಲವರು ಈಗಲೂ ಇದ್ದಾರೆ. ಇಷ್ಟೊಂದು ಜನ ಯುವಕರನ್ನು ಸಂಘಕ್ಕೆ ಸೇರಿಸಿ ಅವರೆಲ್ಲ ಸಂನ್ಯಾಸಿಗಳಾದರೂ, ಇಂದ್ರದಯಾಲ್ ಮಾತ್ರ ಇನ್ನೂ ಅಧಿಕೃತವಾಗಿ ಸಂಘದ ಸದಸ್ಯತ್ವ ಸ್ವೀಕರಿಸಿ ಸಂನ್ಯಾಸಿಯಾಗಿರಲಿಲ್ಲ. ಆದರೆ ಸ್ವಾಮಿ ಶಿವಾನಂದರ ಆಗ್ರಹದ ಮೇರೆಗೆ ಫೆಬ್ರವರಿ ೩. ೧೯೨೧ರಲ್ಲಿ ಸ್ವಾಮಿ ವಿವೇಕಾನಂದರ ಜಯಂತಿಯ ದಿವಸದಂದು ಸಂನ್ಯಾಸವನ್ನು ಸ್ವೀಕರಿಸಿ ಸ್ವಾಮಿ ಪ್ರೇಮೇಶಾನಂದರೆಂಬ ಹೊಸ ಹೆಸರನ್ನು ಪಡೆದರು. ಅನಂತರ ಅನೇಕ ತೀರ್ಥಕ್ಷೇತ್ರಗಳನ್ನು ದರ್ಶಿಸಿ, ಹೃಷೀಕೇಶದಲ್ಲಿ ಕಠಿಣವಾದ ತಪಸ್ಸನ್ನು ಕೈಗೊಂಡರು. ಪ್ರೇಮೇಶಾನಂದರೆಂಬ ಹೆಸರು ಇವರಿಗೆ ಅನ್ವರ್ಥವಾಗಿತ್ತೆಂಬ ಸತ್ಯ ಅವರೊಂದಿಗೆ ಸಂಪರ್ಕಪಡೆದವರೆಲ್ಲರಿಗೂ ತಿಳಿದುಬಂದಿದೆ. ಅವರೆಲ್ಲರ ಹೃದಯಗಳು ಪ್ರೇಮದ ಅಮೃತವನ್ನು ಸವಿದು ತೃಪ್ತವಾಗಿವೆ.

ಸ್ವಾಮಿ ಪ್ರೇಮೇಶಾನಂದರು ಅನೇಕ ಕಿರು ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು: *ಶಂಕರ ಚರಿತ, ಪರಮಹಂಸದೇವ ಶ್ರೀರಾಮಕೃಷ್ಣ ಚರಿತ, ವಿವೇಕಾನಂದ ಚರಿತ, ದಶಾವತಾರ ಚರಿತ, ರಾಮಾನುಜ ಚರಿತ, ಗೀತಾಸಾರ ಸಂಗ್ರಹ.* ಇವಲ್ಲದೆ, ಅವರು ಅನೇಕರಿಗೆ ಬರೆದ ಸ್ಫೂರ್ತಿದಾಯಕ ಪತ್ರಗಳು ಬಂಗಾಳಿಭಾಷೆಯಿಂದ GO FORWARD (ಮೂರು ಭಾಗಗಳಲ್ಲಿ) ಎಂಬ ಹೆಸರಿನಲ್ಲಿ ಇಂಗ್ಲೀಷಿಗೆ ತರ್ಜುಮೆಗೊಂಡಿದೆ. ಆ ಪತ್ರಗಳನ್ನು ಓದಿದ ಯಾರೇ ಆಗಲಿ, ಒಂದು ಸಮಗ್ರವಾದ ಆದರ್ಶ ಜೀವನಕ್ಕೆ ಬೇಕಾದ ಎಲ್ಲ ವಿಷಯಗಳನ್ನು ಸಂಶಯಕ್ಕೆಡೆಯಿಲ್ಲದಂತೆ ತಿಳಿಯಬಹುದು. ನಾರಾಯಣ್‌ಗಂಜ್ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಸಂಪೂರ್ಣಾನಂದರ ಕೋರಿಕೆಯ ಮೇರೆಗೆ, ಆದರ್ಶ ಜೀವನ ನಡೆಸಲು ಯುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವಂಥ ಎಲ್ಲ ಅಂಶಗಳನ್ನು ಒಳಗೊಂಡ, ಎರಡು ಭಾಗಗಳ ಕರಪತ್ರವೊಂದನ್ನು ಸ್ವಾಮಿ ಪ್ರೇಮೇಶಾನಂದರು ಬಂಗಾಳಿಭಾಷೆಯಲ್ಲಿ ಬರೆದರು. ಶಿಕ್ಷಣದ ಉದ್ದೇಶ ಹಾಗೂ ವಿದ್ಯಾರ್ಥಿಗಳ ಕರ್ತವ್ಯಗಳನ್ನು ಅತಿ ಸರಳವಾದ ಭಾಷೆಯಲ್ಲಿ, ಅತ್ಯಂತ ಸ್ಪಷ್ಟವಾಗಿ ಒಳಗೊಂಡ ಇದು 'ಆತ್ಮವಿಕಾಸ್' ಎಂಬ ಹೆಸರಿನ ಕಿರುಹೊತ್ತಿಗೆಯಾಗಿ ಅನಂತರ ಪ್ರಕಟವಾಯಿತು. ಕನ್ನಡನಾಡಿನ ವಿದ್ಯಾರ್ಥಿಗಳಿಗೆ ಇದು ದೊರಕಲೆಂಬ ದೃಷ್ಟಿಯಿಂದ ಅದರ ಅನುವಾದವನ್ನಿಲ್ಲಿ ಕೊಡಲಾಗಿದೆ. **ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಾಮಿ ಕರುಣಾಕರಾನಂದರು ಇದರ ಅನುವಾದವನ್ನು ಮಾಡಿಕೊಟ್ಟಿದ್ದಾರೆ.**

# ಆತ್ಮವಿಕಾಸ

## ಮೊದಲನೆಯ ಪಾಠ

ಇವು ವಿದ್ಯಾರ್ಥಿನಿಲಯಕ್ಕೆ ಹೊಸದಾಗಿ ಸೇರಿದ ವಿದ್ಯಾರ್ಥಿಗಳನ್ನು ಕುರಿತು ನಾನು ಹೇಳಲೇಬೇಕಾದ ಮೊದಲ ಮಾತುಗಳು:

ವಿದ್ಯಾರ್ಥಿಗಳೇ, ಇಂದಿನಿಂದ ನಿಮ್ಮೆಲ್ಲರಿಗೂ ಹೊಸ ಜೀವನ ಶುರುವಾಗಿದೆ. ಇಷ್ಟು ದಿನವೂ ನಿಮ್ಮ ಮನೆಗಳಲ್ಲೇ ವಾಸವಾಗಿದ್ದಿರಿ; ಇಂದಿನಿಂದ ದೇವಾಲಯದಲ್ಲಿ ಇರಬೇಕಾಗಿದೆ. ಇಷ್ಟು ದಿನವೂ ನೀವು ನಿಮ್ಮ ಸ್ವಂತ ತಂದೆ, ತಾಯಿ, ಸೋದರ, ಸೋದರಿಯರೊಂದಿಗೆ ವಾಸಿಸುತ್ತಿದ್ದಿರಿ; ಇಂದಿನಿಂದ ನೀವು ಹೊಸ ಪರಿಸರದಲ್ಲಿ, ಹೊಸ ಪೋಷಕರ ಅಧೀನದಲ್ಲಿ, ಹೊಸ ಸಂಗಾತಿಗಳೊಂದಿಗೆ ಬಾಳಬೇಕಾಗಿದೆ.

ನಿಮ್ಮ ವಯಸ್ಸಿನ ಬೇರೆ ಹುಡುಗರು ಮಾಡುತ್ತಿರುವಂತೆ, ನೀವು ನಿಮ್ಮ ನಿಮ್ಮ ಸ್ವಂತ ಮನೆಗಳಲ್ಲಿದ್ದುಕೊಂಡೇ ಓದಬಹುದಾಗಿತ್ತು ಅಥವಾ ಯಾವುದಾದರೂ (ಸರ್ಕಾರಿ ಅಥವಾ ಖಾಸಗಿ) ವಿದ್ಯಾರ್ಥಿನಿಲಯದಲ್ಲಿರಬಹುದಾಗಿತ್ತು. ಹಾಗಿದ್ದರೂ ನೀವು ಈ ದೇವಾಲಯದಲ್ಲೇ ವಾಸಿಸಬೇಕೆಂದು ಏಕೆ ಬಂದಿರಿ? ಏಕೆಂದರೆ, ಕೇಳಿ–

**ಮೊದಲನೆಯ ಉದ್ದೇಶ** – ನೀವು ಇಲ್ಲಿ ವಾಸ ಮಾಡುತ್ತ ದೇಶ, ಜಾತಿ ಅಥವಾ ಪರಿಸರಗಳೆಂಬ ಕ್ಷುದ್ರ ಎಲ್ಲೆಗಳನ್ನು ಮೀರಿ, ಸಕಲ ಮಾನವರನ್ನೂ ನಿಮ್ಮವರೆಂದು ಭಾವಿಸುವುದನ್ನು ಕಲಿಯುತ್ತೀರಿ.

**ಎರಡನೆಯ ಉದ್ದೇಶ** – ನೀವು ಎಲ್ಲರೊಂದಿಗೆ ಸಹಬಾಳ್ವೆ ನಡೆಸುತ್ತ, ಹೇಗೆ ಎಲ್ಲರೂ ಸೇರಿ ಒಮ್ಮನಸ್ಸಿನಿಂದ ಒಂದು ಕೆಲಸವನ್ನು ಮಾಡಬೇಕೆಂಬುದನ್ನು ಕಲಿಯುವಿರಿ.

**ಮೂರನೆಯ ಉದ್ದೇಶ** – ಬಹಳ ವರ್ಷಗಳ ನಂತರ ನಾವು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಭಾರತದ ಉನ್ನತಿ ಅಥವಾ ಅವನತಿಗಳಿಗೆ ನಾವು ಪ್ರತಿಯೊಬ್ಬರೂ ಜವಾಬ್ದಾರರು. ಹೀಗಾಗಿ, ಯಾವುದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ ಅಥವಾ ಕೆಡುಕುಂಟಾಗುತ್ತದೆ ಎಂಬುದನ್ನು ನೀವು ತಿಳಿದಿರಬೇಕು. ಅದರ

ಜೊತೆಗೆ ದೇಶಕ್ಕೆ ಬರುವ ವಿಪತ್ತುಗಳನ್ನು ತೊಡೆದುಹಾಕಿ ದೇಶಹಿತಕ್ಕಾಗಿ ದುಡಿಯುವ ಶಕ್ತಿಯನ್ನು ಸಂಪಾದಿಸಬೇಕು.

**ನಾಲ್ಕನೆಯ ಉದ್ದೇಶ** – ಭಗವಾನ್ ಶ್ರೀರಾಮಕೃಷ್ಣರ ಹೆಸರಿನಲ್ಲಿ ಪ್ರತಿಷ್ಠಾಪಿಸಲಾದ ಈ ದೇವಾಲಯದಲ್ಲಿ ವಾಸಿಸುವ ಮುಖ್ಯ ಉದ್ದೇಶ ನೀವೂ ಅವರಂತೆ ಪವಿತ್ರರಾಗಿ ಮತ್ತು ಅವರ ಹಾಗೆ ಪರಹಿತಕ್ಕಾಗಿ ದುಡಿಯುವವರಾಗಿ.

**ಎರಡನೆಯ ಪಾಠ**

ವಿದ್ಯಾರ್ಥಿಗಳೆ, ನಿಮ್ಮ ಈ ಹೊಸಜೀವನದ ಉದ್ದೇಶಗಳನ್ನು ನೀವು ಅರಿತುಕೊಂಡಿರಿ ಎಂದು ಭಾವಿಸುತ್ತೇನೆ. ಈ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಉಪಾಯಗಳ ಕುರಿತು ಈಗ ಆಲೋಚಿಸೋಣ.

**ಪ್ರಥಮ ಉಪಾಯ – ನಿಯಮನಿಷ್ಠೆ:**

ಯಾವುದಾದರೂ ಒಂದು ಹೊಸ ಸ್ಥಳಕ್ಕೆ ಹೋದರೆ ಅಲ್ಲಿನ ರೀತಿ–ನೀತಿಗಳನ್ನು, ಆಚಾರ–ವ್ಯವಹಾರಗಳನ್ನು ತಿಳಿಯದೆ ಹೋದರೆ, ನಾವು ತೊಂದರೆಗೆ ಸಿಕ್ಕಿಕೊಳ್ಳುವುದಲ್ಲದೆ ಬೇರೆಯವರನ್ನೂ ತೊಂದರೆಗೆ ಈಡುಮಾಡುತ್ತೇವೆ. ಆದ್ದರಿಂದ ಮೊತ್ತಮೊದಲು ಈ ಸಂಸ್ಥೆಯ ಸ್ಪಷ್ಟವಾದ ಆದರ್ಶಗಳನ್ನು ಚೆನ್ನಾಗಿ ಅರಿತುಕೊಳ್ಳಿ ಹಾಗೂ ನಿಮ್ಮ ಶ್ರೇಯಸ್ಸಿಗೆ ಕಾರಣವಾಗುವ ಜ್ಞಾನ ಮತ್ತು ಶ್ರದ್ಧೆಗಳ ಸಹಾಯದಿಂದ ಅವುಗಳನ್ನು ಅನುಸರಿಸಿರಿ.

**ನಿಯಮ:**

೧. ಪ್ರತಿದಿನವೂ, ಎಲ್ಲ ಕೆಲಸಗಳನ್ನೂ ನಿರ್ದಿಷ್ಟವಾದ ಸಮಯದಲ್ಲಿ ಪಾಲಿಸುವ ವಿಷಯವಾಗಿ ಯಾವಾಗಲೂ ಜಾಗರೂಕರಾಗಿರಿ. ಇದರಿಂದ ಎಲ್ಲರೊಡನೆ ಸರಿಯಾದ ಸಮಯದಲ್ಲಿ ಕೆಲಸದಲ್ಲಿ ಭಾಗಿಯಾಗುವುದು ಸಾಧ್ಯವಾಗುತ್ತದೆ.

೨. ವಿದ್ಯಾಲಯದ ಪ್ರತಿದಿನದ ಪಠ್ಯವಿಷಯದಲ್ಲಿ ಒಂದಿನಿತೂ ಕುಂದು ಬರದಂತೆ ನಿಮ್ಮ ಅಧ್ಯಯನವನ್ನು ದೈನಂದಿನ ಕಾರ್ಯಕ್ರಮವನ್ನಾಗಿ ರೂಪಿಸಿಕೊಳ್ಳಿ.

೩. ವರ್ಷದ ಕೊನೆಯಲ್ಲಿ, ಪರೀಕ್ಷೆಯಲ್ಲಿ ಪಾಸಾಗಬೇಕೆಂಬ ಭಯಂಕರ ಒತ್ತಡವನ್ನು ನಿವಾರಿಸಿಕೊಳ್ಳಬೇಕಾದರೆ, ಅಧ್ಯಯನದ ವಿಷಯಗಳನ್ನು ಪ್ರಾರಂಭದಿಂದಲೇ ಚೆನ್ನಾಗಿ ಕರಗತ ಮಾಡಿಕೊಳ್ಳಬೇಕಾಗುತ್ತದೆ.

೪. ಆಹಾರದ ವಿಷಯದಲ್ಲಿ ಹಿತ–ಅಹಿತ ಯಾವುದೆಂಬ ತಿಳುವಳಿಕೆ ಹಾಗೂ ಎಚ್ಚರಿಕೆ ಹೊಂದಿರುವುದು ಅತ್ಯಂತ ಆವಶ್ಯಕ.

೫. ಪ್ರತಿದಿನ ಮಲಗುವ ಮೊದಲು, ಕರ್ತವ್ಯದಲ್ಲಿ ಇಂದೇನಾದರೂ ಲೋಪವಾಗಿದೆಯೆ ಇಲ್ಲವೆ ಎಂದು ಒಂದು ಕ್ಷಣ ಯೋಚಿಸಿ ನೋಡಿ.

**ಎರಡನೆಯ ಉಪಾಯ – ಅಚ್ಚುಕಟ್ಟಾಗಿರುವುದು:**

ಸಭ್ಯತೆಯ ಪ್ರಮುಖ ಲಕ್ಷಣವೇ ಎಲ್ಲವನ್ನೂ ಸ್ವಚ್ಛವಾಗಿ ಹಾಗೂ ಓರಣವಾಗಿ ಇಡುವುದು. ಶುಭ್ರವಾಗಿರುವುದು ಹಾಗೂ ಅಚ್ಚುಕಟ್ಟಾಗಿರುವುದು ಧಾರ್ಮಿಕ ಜೀವನದ ಪ್ರಧಾನ ಶಿಸ್ತಾಗಿದೆ. ಆದ್ದರಿಂದ ಸ್ವಚ್ಛವಾಗಿರಲು ಹಾಗೂ ಅಚ್ಚುಕಟ್ಟಾಗಿರಲು ಈ ಕೆಳಗಿನ ನಿಯಮಗಳನ್ನು ಪಾಲಿಸಿ.

**ನಿಯಮ:**

೧. ನಿಮ್ಮ ಉಡುಪುಗಳು, ಹಾಸಿಗೆ, ಪೀಠೋಪಕರಣಗಳು ಹಾಗೂ ನೀವು ವಾಸಿಸುವ ಕೋಣೆ –ಇವು ಯಾವಾಗಲೂ ಶುಚಿಯಾಗಿರುವಂತೆ ನೋಡಿಕೊಳ್ಳಿ.

೨. ನಿಮ್ಮೆಲ್ಲ ವಸ್ತುಗಳನ್ನು ಯಾವ ರೀತಿ ಜೋಡಿಸಿಡಬೇಕೆಂದರೆ, ಯಾರಾದರೂ ನಿಮ್ಮ ಕೋಣೆಗೆ ಪ್ರವೇಶಿಸಿದಲ್ಲಿ ಅವರಿಗೆ ನಿಮ್ಮ ಉತ್ತಮ ಅಭಿರುಚಿಯ ಪರಿಚಯವಾಗಬೇಕು; ಹಾಗೆಯೇ ಯಾವುದಾದರೂ ವಸ್ತುವಿನ ಅಗತ್ಯವಿದ್ದಲ್ಲಿ ಅದಕ್ಕಾಗಿ ನೀವು ಹೆಚ್ಚು ಹುಡುಕಾಡುವಂತಿರಬಾರದು.

೩. ನೀವಂತೂ ಸ್ವಚ್ಛವಾಗಿರುತ್ತೀರಷ್ಟೆ; ಹಾಗೆಯೇ ನಿಮ್ಮ ಜೊತೆಯಲ್ಲಿರುವವರೂ ಅದೇ ರೀತಿ ಇರುವಂತೆ ಪ್ರೇರೇಪಿಸಿ. ಹಾಗೂ ಅವರಿಗೆ ಆ ದಿಸೆಯಲ್ಲಿ ಸಹಾಯ ಮಾಡಿ.

೪. ನೀವು ಬಳಸುವ ಎಲ್ಲ ವಸ್ತುಗಳನ್ನೂ ಗೌರವದಿಂದ ಕಾಣಿರಿ.

೫. ಇಡೀ ವಿದ್ಯಾರ್ಥಿನಿಲಯದ ಎಲ್ಲ ಜಾಗಗಳೂ ಸುಂದರವಾಗಿರಬೇಕಾದರೆ, ಏನು ಮಾಡಬೇಕೆಂಬ ಬಗ್ಗೆ ನಿಮ್ಮ ಮನಸ್ಸು ಸದಾ ಕಾರ್ಯನಿರತವಾಗಿರಲಿ.

**ಮೂರನೆಯ ಉಪಾಯ – ಲೋಕವ್ಯವಹಾರ**

ಯಾವುದೇ ವ್ಯಕ್ತಿ, ಸ್ವತಃ ಎಷ್ಟೇ ಧಾರ್ಮಿಕನಾಗಿರಲಿ ಅಥವಾ ವಿದ್ವಾಂಸನಾಗಿರಲಿ, ಜನರೊಂದಿಗೆ ಹಿತವಾಗಿ, ನ್ಯಾಯ ಸಮ್ಮತವಾಗಿ ವ್ಯವಹರಿಸದೆ ಇದ್ದಲ್ಲಿ, ಅವನನ್ನು ಯಾರೂ ನಂಬುವುದಿಲ್ಲ, ಪ್ರೀತಿಸುವುದೂ ಇಲ್ಲ. ಹತ್ತು ಜನರ ಸಹಾಯವಿಲ್ಲದೆ ನಾನೊಬ್ಬನೇ ಬದುಕಲಾರೆನೆಂಬುದನ್ನು ತಿಳಿಯಿರಿ. ಯಾರೊಂದಿಗೂ ಯಾವತ್ತೂ ನಿಷ್ಠುರವಾಗಿ ವ್ಯವಹರಿಸಬೇಡಿ.

ಕೆಳಗೆ ಬರೆದಿರುವ ನಿಯಮಗಳನ್ನು ಮನವಿಟ್ಟು ಓದಿ, ಅರ್ಥ ಮಾಡಿಕೊಂಡು ಸದಾ ಪಾಲಿಸಿ.

**ನಿಯಮ**

೧. ಎಲ್ಲರೊಂದಿಗೆ ನಿಮ್ಮ ನಡೆವಳಿಕೆ ಹೇಗಿರಬೇಕೆಂದರೆ, ಯಾರೂ ನಿಮ್ಮನ್ನು ಹೊರಗಿನವರೆಂದು ಭಾವಿಸಬಾರದು.

೨. ಗುರು–ಹಿರಿಯರೊಂದಿಗೆ ನಿಮ್ಮ ನಡೆನುಡಿಗಳಲ್ಲಿ ಶ್ರದ್ಧೆ ಪ್ರಕಾಶಿಸಲಿ.

೩. ಆಳುಗಳೊಂದಿಗೆ, ಕೂಲಿಕಾರ್ಮಿಕರೊಂದಿಗೆ ಬಂಧುವಿನಂತೆ ವ್ಯವಹರಿಸಿ.

೪. ಯಾವುದೇ ಕೆಲಸದಲ್ಲಿ, ಎಲ್ಲರಿಗೂ ಸಹಾಯ ಮಾಡಲು ಸದಾ ಕಾಲವೂ ಸಿದ್ಧವಾಗಿರಿ.

೫. ಯಾವುದೇ ಕೆಲಸವನ್ನೂ ಕೀಳೆಂದು ಭಾವಿಸಬೇಡಿ. ಮನೆಯ ಕೋಣೆಗಳನ್ನು ಸ್ವಚ್ಛಗೊಳಿಸುವುದು, ಧೂಳು ಹೊಡೆಯುವುದು, ತೊಳೆದು ಒರೆಸುವುದು, ಏನನ್ನಾದರೂ ಹೊತ್ತು ಸಾಗಿಸುವುದು – ಇಂಥ ಯಾವುದೇ ಕೆಲಸದ ಬಗ್ಗೆ ಸ್ವಲ್ಪವೂ ಸಂಕೋಚ ಪಡಬೇಡಿ.

**ನಾಲ್ಕನೆಯ ಉಪಾಯ**

ಸಜ್ಜನರ ಸಮಾಜದಲ್ಲಿರಬೇಕಾದರೆ ನಮ್ಮ ಚಲನವಲನಗಳು, ಮಾತುಕೃತಿಗಳ ಬಗೆಗೆ ವಿಶೇಷ ಎಚ್ಚರಿಕೆ ವಹಿಸಬೇಕಾಗುತ್ತದೆ.

**ನಿಯಮ**

೧. ಮಾತನಾಡುವ ಸಮಯದಲ್ಲಿ ಕೈ ಅಲ್ಲಾಡಿಸುವುದು ಒಂದು ಕೆಟ್ಟ ಅಭ್ಯಾಸ. ವಿನಾಕಾರಣ ಏರುಧ್ವನಿಯಲ್ಲಿ ಮಾತನಾಡಿದರೆ ಕೇಳುವವರಿಗೆ ಬಹಳ ಕಷ್ಟವಾದೀತೆಂಬುದನ್ನು ನೆನಪಿನಲ್ಲಿಡಿ. ಮಾತಿನ ಮಧ್ಯೆ ಮಧ್ಯೆ 'ಹೌದು', 'ಅಂದರೆ', 'ಗೊತ್ತಾಯಿತೆ', 'ಅದೇ', 'ನಿಮ್ಮ' ಇಂತಹ ಅರ್ಥಹೀನ, ಅನಾವಶ್ಯಕ ಶಬ್ದಗಳನ್ನು ಬಳಸುವುದು ಒಂದು ಕೆಟ್ಟ ಅಭ್ಯಾಸವಷ್ಟೇ ಅಲ್ಲ, ಬಹಳ ಅಸಭ್ಯವೂ ಹೌದು.

೨. ಹಲವು ಜನರೊಂದಿಗೆ ಕುಳಿತಿರುವಾಗ ಕಾಲನ್ನು ಅಲ್ಲಾಡಿಸುವುದು ಅಸಭ್ಯ ನಡತೆ.

೩. ಯಾವಾಗಲೂ ಶರೀರವನ್ನು ನೇರವಾಗಿಟ್ಟುಕೊಂಡು ಕುಳಿತುಕೊಳ್ಳದಿದ್ದಲ್ಲಿ, ಅದು ಶರೀರದ ಮೇಲೆ ಬಹಳ ದುಷ್ಪರಿಣಾಮ ಬೀರುತ್ತದೆ. ಬೆನ್ನು ಬಗ್ಗಿಸಿ ಕುಳಿತುಕೊಳ್ಳುವುದು ಆರೋಗ್ಯಕ್ಕೆ ಒಳ್ಳೆಯದಲ್ಲ ಮತ್ತು ಅದು ಚೆನ್ನಾಗಿಯೂ ಕಾಣಿಸುವುದಿಲ್ಲ.

೪. ವಿದ್ಯಾರ್ಥಿಗಳಾದವರು ಬಹಳ ಬೆಲೆ ಬಾಳುವ ಉಡುಪುಗಳನ್ನು ಬಳಸುವುದು ಸರಿಯಲ್ಲ. ಒಟ್ಟಿನಲ್ಲಿ ಹೇಳಬೇಕೆಂದರೆ, ಎಲ್ಲ ವಿಷಯಗಳಲ್ಲಿ ಮಿತವ್ಯಯಿಯಾಗಿರಬೇಕು.

**ಐದನೆಯ ಉಪಾಯ – ಮಹತ್ವಾಕಾಂಕ್ಷೆ**

ಯಾರಿಗೆ ಕೇವಲ ತಿನ್ನುವುದು, ಸುಖವಾಗಿ ಬಾಳ್ವೆ ನಡೆಸುವುದರ ಹೊರತು ಬೇರಾವ ಉನ್ನತ ಆಕಾಂಕ್ಷೆಗಳೂ ಇಲ್ಲವೋ, ಅಂತಹವನಿಗೂ, ಪಶುಪಕ್ಷಿಗಳಿಗೂ ಇರುವ ವ್ಯತ್ಯಾಸವಾದರೂ ಏನು? ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಹೊಟ್ಟೆಪಾಡಿಗಾಗಿ ಕೇವಲ ಒಂದು ನೌಕರಿಯನ್ನು ದಕ್ಕಿಸಿಕೊಳ್ಳುವುದೇ ಯಾರ ಜೀವನದ ಗುರಿಯಾಗಿರುತ್ತದೆಯೋ, ಅವನು ಎಂದೂ ಆತ್ಮೋನ್ನತಿಗಾಗಿ ಪ್ರಯತ್ನಿಸಲು ಮನಸ್ಸು ಮಾಡುವುದಿಲ್ಲ.

ಮನಸ್ಸನ್ನು ಉತ್ತಮಪಡಿಸಿಕೊಳ್ಳಬೇಕಾದರೆ ಕೆಳಗೆ ಹೇಳಿರುವ ಸಂಕಲ್ಪಗಳನ್ನು ಯಾವಾಗಲೂ ನೆನಪಿನಲ್ಲಿಡಿ.

**ಸಂಕಲ್ಪಗಳು:**

೧. ನಾನು ಯಾವುದೇ ವಿಷಯದಲ್ಲಿಯೂ ಯಾರಿಗಿಂತಲೂ ಹಿಂದೆ ಬೀಳುವುದಿಲ್ಲ. ಓದು–ಬರಹ, ಆಟೋಟ, ಕೆಲಸ–ಕಾರ್ಯಗಳು, ಸೌಜನ್ಯಯುತ ನಡತೆ ಎಲ್ಲದರಲ್ಲಿಯೂ ಮುಂದಿರುತ್ತೇನೆ.

೨. ನಾನು ವಿದ್ವಾಂಸನಾಗುತ್ತೇನೆ, ವಿಚಾರವಂತನಾಗುತ್ತೇನೆ. ಯಾವುದೇ ವಿಷಯದಲ್ಲಿ ನಾನು ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಾದಾಗ, ಅದನ್ನು ಯಾರೂ ತಿರಸ್ಕರಿಸುವಂತಿರಬಾರದು.

೩. ನಾನು ಒಳ್ಳೆಯ ಮಾರ್ಗದಿಂದ ಧನಾರ್ಜನೆ ಮಾಡಿ, ದಾನಿ ಎಂಬ ಖ್ಯಾತಿಯನ್ನು ಗಳಿಸುತ್ತೇನೆ.

೪. ನಾನು ಆರೋಗ್ಯವಂತನೂ, ಬಲಶಾಲಿಯೂ ಆಗುತ್ತೇನೆ. ನಾನೆಂದಿಗೂ ಅನ್ಯಾಯದ ಕೆಲಸವನ್ನು ಮಾಡುವುದಿಲ್ಲ. ನನ್ನ ಎದುರಿನಲ್ಲಿ ಯಾರೂ ಯಾವ ಅನ್ಯಾಯದ ಕೆಲಸವನ್ನೂ ಮಾಡಲು ದುಸ್ಸಾಹಸ ಮಾಡುವಂತಿರಬಾರದು.

೫. ನಾನು ಸದಾ ಸತ್ಯವನ್ನೇ ನುಡಿಯುತ್ತೇನೆ. ನನ್ನ ಮಾತೆಂದರೆ ಯಾರೂ ಎಂದಿಗೂ ಸಂದೇಹಪಡದಂತಿರಬೇಕು.

*(ಮುಂದುವರಿಯುತ್ತದೆ)*

ಲಿಂಕನ್ ಅಮೆರಿಕದ ಅಧ್ಯಕ್ಷರಾಗುವ ಮುಂಚೆ ಒಮ್ಮೆ ಪ್ರಾರ್ಥನೆಯ ಸಭೆಗೆ ಹೋಗಿದ್ದರು. ಸಭೆಯಲ್ಲಿ ಲಿಂಕನ್ ಇರುವುದನ್ನು ಕಂಡು, "ಇಲ್ಲಿ ನೆರೆದಿರುವವರಲ್ಲಿ ಯಾರ್ಯಾರು ಸ್ವರ್ಗಕ್ಕೆ ಹೋಗಲು ಬಯಸುವಿರಿ? ಕೈ ಮೇಲಕ್ಕೆತ್ತಿ" ಎಂದು ಪಾದ್ರಿ ಕೇಳಿದ. ಲಿಂಕನ್ ಹೊರತು ಎಲ್ಲರೂ ಕೈ ಮೇಲೆತ್ತಿದರು. "ನರಕಕ್ಕೆ ಹೋಗಲು ಬಯಸದೇ ಇರುವವರು ಯಾರ್ಯಾರು?" ಎಂದು ಮತ್ತೆ ಪಾದ್ರಿ ಕೇಳಿದರು. ಈಗಲೂ ಲಿಂಕನ್ ಕೈ ಎತ್ತಲಿಲ್ಲ. ಪಾದ್ರಿಗಳು ಲಿಂಕನ್‌ರನ್ನು ಕೇಳಿದರು, "ಲಿಂಕನ್ ಸರ್, ನೀವು ಹಾಗಾದರೆ ಎಲ್ಲಿಗೆ ಹೋಗ ಬಯಸುವಿರಿ?" ಲಿಂಕನ್ ಬೇಸರಗೊಳ್ಳದೆ ಹೇಳಿದರು, "ಎಲ್ಲಿಗೂ ಇಲ್ಲ, ಕಾಂಗ್ರೆಸ್ಸಿಗೆ!" ಲಿಂಕನ್‌ರಲ್ಲಿದ್ದ ಕಾರ್ಯಶ್ರದ್ಧೆ ಹೀಗಿತ್ತು.